ಅಗತ್ಯವಿಲ್ಲದೆ ಕೊಲೆಗಡುಕನನ್ನು ಕೊಲೆಗಡುಕ ಎಂದೇ ಕರೆಯಬೇಕಾಗುತ್ತದೆ.

ಈ ಯುದ್ಧದ ಮೂಲ ಕಾರಣಗಳ ಬಗ್ಗೆ, ನಾನು ಒಬ್ಬ scholar ಆಗಿ ಕೂಡ ಮಾತನಾಡಬಲ್ಲೆ. ನಾನು ಮೊಟ್ಟ ಮೊದಲಿಗೆ ರಷ್ಯಾದ ನವ ಸಾಮ್ರಾಜ್ಯಶಾಹಿ ಮಹತ್ವಾಕಾಂಕ್ಷೆಗಳನ್ನು ಎತ್ತಿ ತೋರಿಸುತ್ತೇನೆ. ಇದು ಆ ದೇಶದ ಪ್ರಸ್ತುತ ನಾಯಕತ್ವವನ್ನು ಇಂತಹ ಭಯಾನಕ ಮೂರ್ಖತನಕ್ಕೆ ತಳ್ಳಿದೆಯೆಂದರೆ, ಇಂದಿನ ಅನೇಕ ಇತಿಹಾಸಕಾರರು ಮತ್ತು ರಾಜಕೀಯ ವಿದ್ವಾಂಸರು ರಷ್ಯನ್ ಸಾಮ್ರಾಜ್ಯವನ್ನು ಮಾತ್ರವಲ್ಲದೆ, ಸೋವಿಯತ್ ಒಕ್ಕೂಟವನ್ನು ಕೂಡ ವಾಸ್ತವವಾಗಿ quasi-imperial superstate ಎಂದು ಹೇಳುತ್ತಾರೆ. ರೂಢಿಗತವಾಗಿ ಬೌದ್ಧಿಕ ಸಮುದಾಯವು ಸಾಗರದಾಚೆಯ ಪ್ರದೇಶಗಳನ್ನು ನಿಯಂತ್ರಿಸಿದ ಸಾಮ್ರಾಜ್ಯಗಳ ನಡುವಿನ ವಸಾಹತುಶಾಹಿ ಸಂಬಂಧಗಳ ಬಗ್ಗೆ ಚರ್ಚಿಸುತ್ತಿದ್ದವು. ಈ ಚರ್ಚೆಯು ಇತ್ತೀಚಿನ ದಶಕಗಳಲ್ಲಿ ಬದಲಾಗಿದೆ.

**◆ ರಷ್ಯಾ-ಉಕ್ರೇನ್ ಯುದ್ಧ, ಜಗತ್ತಿನ ಗಮನ ಸೆಳೆದಿದೆ. ಈಗ ಅಲ್ಲಿನ ಜನ ಸಾಮಾನ್ಯರ ಪರಿಸ್ಥಿತಿ ಹೇಗಿದೆ?**

ಯುದ್ಧ ಕ್ಷೇತ್ರಗಳಿಗೆ ಹತ್ತಿರವಿರುವ ಕೆಲವು ಪ್ರದೇಶಗಳು ಹೆಚ್ಚು ಪ್ರಭಾವಕ್ಕೆ ಒಳಗಾಗಿವೆ. ಇನ್ನು ಕೆಲವು ಪ್ರದೇಶಗಳು ರಷ್ಯಾ ಆಕ್ರಮಣದ ಹಿಡಿತದಲ್ಲಿರುವುದರಿಂದ ಅವುಗಳ ಸ್ಥಿತಿಯನ್ನು ಸರಿಯಾಗಿ ಅಂದಾಜು ಮಾಡಲು ಸಾಧ್ಯವಾಗುತ್ತಿಲ್ಲ. ಕೆಲವು ಜಾಗಗಳನ್ನ ನೋಡಿದರೆ, ಮೊದಲ ನೋಟಕ್ಕೆ ಇದು ಯುದ್ಧಪೀಡಿತ ದೇಶ ಅಂತ ಯಾರಿಗೂ ಅನ್ನಿಸೋದಿಲ್ಲ. ಎಲ್ಲಾ ಸಾಮಾನ್ಯವಾಗಿರುವಂತೆ ಕಾಣುತ್ತೆ. ಆದರೂ, ಅಲ್ಲಿ ಕೂಡ ರಷ್ಯಾ ಎಂಬ ಸರ್ವಾಧಿಕಾರಿ ರಾಷ್ಟ್ರ ಡ್ರೋನ್ ಯುದ್ಧ ತಂತ್ರಗಳನ್ನು ಬಳಸಿ ಶಾಲೆಗಳು, ಆಸ್ಪತ್ರೆಗಳು, ರೈಲು ನಿಲ್ದಾಣಗಳು, ವಿದ್ಯುತ್ ಸ್ಥಾವರಗಳು, ಮಾರುಕಟ್ಟೆಗಳು ಮುಂತಾದ ನಾಗರಿಕ ಮೂಲಸೌಕರ್ಯಗಳನ್ನು ನಾಶ ಮಾಡೋ ಕ್ರಿಮಿನಲ್ ಕೃತ್ಯಗಳನ್ನು ಎಸಗುತ್ತಿದೆ. ಹಾಗಾಗಿ ಇಲ್ಲಿ ಯಾರೂ ಕೂಡ ಸುರಕ್ಷಿತರಲ್ಲ. ಆದರೆ ಎಲ್ಲೆಡೆ ಜನರು ಈ ಕಷ್ಟದ ದಿನಗಳಲ್ಲಿಯೂ ತಮ್ಮ ಜೀವನವನ್ನು ಭರವಸೆಯಿಂದ ಮುಂದುವರಿಸಿದ್ದಾರೆ. ನಾನು ಉಕ್ರೇನ್ ಬಗ್ಗೆ ವಿದೇಶದಲ್ಲಿ ಮಾತನಾಡುವಾಗ ಈ ಚಿತ್ರಣವನ್ನು ವಿವರಿಸೋದು ಕೆಲವೊಮ್ಮೆ ಕಷ್ಟವಾಗುತ್ತೆ. ಯುದ್ಧದಂತಹ ಊಹಿಸಲಾಗದಷ್ಟು ಕ್ರೂರವಾದ ಅನ್ಯಾಯ ನಡೆಯುವಾಗ, ಸಾಮಾನ್ಯ ಜನಜೀವನ ನಿಂತು ಹೋಗುತ್ತೆ ಅಂತ ನಾವೆಲ್ಲ ಯೋಚಿಸುತ್ತೇವೆ ಅನ್ನುತ್ತೆ. ಈ ಯುದ್ಧ ಶುರುವಾಗೋ ಮೊದಲು, ನಾನು ಸಹ ಯುದ್ಧ ಶುರುವಾದಾಗಿನಿಂದ ಮುಗಿಯುವತನಕ ನಿತ್ಯ ಬದುಕಿನ ಎಲ್ಲಾ ವ್ಯವಹಾರಗಳು ನಿಂತು ಹೋಗುತ್ತವೆ ಅಂತ ಯೋಚಿಸಿದ್ದೆ. ಆದರೆ, ಇದು ಹಾಗೆ ಅಲ್ಲವೇ ಅಲ್ಲ. ಎಂದಿನಂತೆ ಜನರು ತಮ್ಮ ಕೆಲಸ ಕಾರ್ಯಗಳಿಗೆ ಹೋಗುತ್ತಿದ್ದಾರೆ, ಸಾರ್ವಜನಿಕ ವಾಹನಗಳನ್ನು ಬಳಸುತ್ತಿದ್ದಾರೆ, ಬಿಡುವಿನ ವೇಳೆಯಲ್ಲಿ ಕೆಫೆ ಮತ್ತು ರೆಸ್ಟೋರೆಂಟ್‌ಗಳಿಗೆ ಭೇಟಿ ನೀಡುತ್ತಿದ್ದಾರೆ, ಕವಿಗೋಷ್ಠಿಗಳನ್ನು ಆಯೋಜಿಸುತ್ತಿದ್ದಾರೆ. ನನ್ನ ಇತ್ತೀಚಿನ ಕವನ ಸಂಕಲನವು 2024ರ ಆಗಸ್ಟ್‌ನಲ್ಲಿ ಉಕ್ರೇನಿನ ಪಶ್ಚಿಮದಲ್ಲಿರುವ Lvivನ ಪ್ರಕಾಶಕ ಸಂಸ್ಥೆಯಿಂದ ಹೊರಬಂತು. ರಷ್ಯಾದ ಗಡಿಗೆ ಹತ್ತಿರವಿರುವ Kharkivನಲ್ಲಿ ಇದು ಮುದ್ರಣಗೊಂಡು ಮಾರಾಟವಾಗಿದೆ; 2022ರಿಂದ ಉಕ್ರೇನ್‌ನಾದ್ಯಂತ ನೂರಾರು ಹೊಸ ಪುಸ್ತಕ ಮಳಿಗೆಗಳು ಆರಂಭವಾದವು ಮತ್ತು ಡಜನ್‌ಗಟ್ಟಲೆ ಪ್ರಕಾಶನ ಸಂಸ್ಥೆಗಳು ಸ್ಥಾಪನೆಯಾದವು. ಒಂದು ರೀತಿಯಲ್ಲಿ ಇದು ಜನರು ತಮ್ಮ ಪುಟಿವ ಚೈತನ್ಯ ತೋರಿಸುವ ವಿಧಾನ. ಶತ್ರುಗಳಿಗೆ ತಮ್ಮ ಬಾಳಿನ ಅಮೂಲ್ಯ ಸಂಗತಿಗಳನ್ನು ಹಾಳುಮಾಡಲು ಬಿಡದೆ ಇರುವುದು, ಆದರೆ ಮತ್ತೊಂದು ರೀತಿಯಲ್ಲಿ ಈ ಕಷ್ಟದ ಸಮಯದಲ್ಲಿ ಬದುಕಲು ಮತ್ತು ಮಾನಸಿಕ ಸಮತೋಲನ ಕಾಪಾಡಿಕೊಳ್ಳಲು ಒಂದು ದೈನಂದಿನ ದಿನಚರಿಗೆ ಆತುಕೊಳ್ಳುವುದೂ ಒಂದು ಮಾನಸಿಕ ಅಗತ್ಯವಾಗಿರಬಹುದು.

**◆ ನೀವು ಸಾಕಷ್ಟು ಯುದ್ಧವಿರೋಧಿ ಕವಿತೆಗಳನ್ನು ಬರೆದಿದ್ದೀರಿ. ಅದರ ಕುರಿತು ಸ್ವಲ್ಪ ಹಂಚಿಕೊಳ್ಳಿ**

ನನ್ನ ಕವಿತೆಗಳು ಸ್ವತಃ ತಾವೇ ಮಾತನಾಡುತ್ತವೆ ಎಂದು ನಾನು ಭಾವಿಸುತ್ತೇನೆ. ನಾನಾಗಲಿ - ನನ್ನ ಯಾವುದೇ ಉಕ್ರೇನಿಯನ್ ಕವಿಗಳಾಗಲಿ - ನಮ್ಮಲ್ಲಿ ಯಾರೂ ಈ ಪದ್ಯಗಳನ್ನು ಬರೆಯಬೇಕಾಗಿ